**O.S.No. 377/2014 PW.4**

ದಿಃ **02-07-2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್.ಎಸ್.ಎನ್ ರವರಿಂದಃ</u>

ನಾನು ಅನಕ್ಷರಸ್ಥನಾಗಿರುವುದರಿಂದ ನಿಖರಾವಾಗಿ ಯಾವ ವರ್ಷದಂದು ನಾನು ಜನಿಸಿರುತ್ತೇನೆ ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ನನ್ನ ವಯಸ್ಸು 60 ಇದೇ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಅನಕ್ಷರಸ್ಥನಾಗಿರುವುದರಿಂದ ದಾವಾ ಸ್ವತ್ತಿನ ನಂಬರ ಹೇಳಲು ಆಗುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಬರೆಯಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ದಾವಾ ಸ್ವತ್ತಿನ ಬ್ಲಾಕ ನಂಬರ ಮತ್ತು ಸರ್ವೇ ನಂಬರಗಳ ಬಗ್ಗೆ ನಾನೇ ಮಾಹಿತಿ ನೀಡಿರುತ್ತೇನೆ ಆದರೆ ಈಗ ಹೇಳಲು ಆಗುವುದಿಲ್ಲ. ಮುಖ್ಯ ವಿಚಾರಣೆ ತಯಾರಿಸಿದ ನಂತರ ನನ್ನ ವಕೀಲರು ನನಗೆ ಓದಿ ಹೇಳಿರುವುದಿಲ್ಲ.

ದಾವಾ ಸ್ವತ್ತು ಮೂಲತಃ ಫಕೀರವ್ವ ಕುರಿಯವರಿಗೆ ಸೇರಿದ ಸ್ವತ್ತಾಗಿತ್ತು ಎಂದು ಬರೆಸಿರುತ್ತೇನೆ ಎಂದರೆ ಸರಿ. ಸದರಿ ಸ್ವತ್ತಿನ ಆಗಿನ ಸರ್ವೇ ನಂ. ನನಗೆ ನೆನಪಿಲ್ಲ. ಬಹಳ ವರ್ಷಗಳ ಹಿಂದೆ ಫಕೀರವ್ವ ಕುರಿಯವರ ಹೆಸರು ದಾವಾ ಸ್ವತ್ತಿನಲ್ಲಿ ಇತ್ತು. ಯಾವ ವರ್ಷ ಎಂಬುದು ನನಗೆ ಹೇಳಲು ಆಗುವುದಿಲ್ಲ. ವಾದಿಯ ಅಣ್ಣ ರಾಮಪ್ಪ ದಾವಾ ಸ್ವತ್ತನ್ನು ಅಂದಾಜು 70 ವರ್ಷಗಳ ಹಿಂದೆ ಖರೀದಿ ಮಾಡಿರುತ್ತಾರೆ. ನಿಖರವಾಗಿ ದಿನಾಂಕ, ತಿಂಗಳು ಮತ್ತು ವರ್ಷ ನನಗೆ ಹೇಳಲು ಆಗುವುದಿಲ್ಲ.

ದಾವಾ ಸ್ವತ್ತು 1951 ರಲ್ಲಿ ರವಿವರ್ಮಾ ದೇಸಾಯಿಯವರ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ಮೊದಲು ಸರ್ವೇ ನಂ. 27/6 ಅಂತಾ ಇತ್ತು ನಂತರ ಬ್ಲಾಕ ನಂ.79 ಅಂತಾ ಪರಿವರ್ತನೆ ಆಗಿತ್ತು ಎಂದು ಯಾವ ದಾಖಲೆಯನ್ನು ನೋಡಿ ಬರೆಸಿರುತ್ತೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ಈಗ ಗೊತ್ತಾಗುತ್ತಿಲ್ಲ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತು ಯಾವ ವರ್ಷದಲ್ಲಿ ಬ್ಲಾಕ ನಂ.79 ಆಗಿರುತ್ತದೆ ಎಂಬುದು ನನಗೆ ಹೇಳಲು ಆಗುವುದಿಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ನಾನು ಹೆಬ್ಬರಳಿನ ಮನುಷ್ಯನಾಗಿರುತ್ತೇನೆ ನನಗೆ ವರ್ಷ ತಿಂಗಳುಗಳ ಬಗ್ಗೆ ಕೇಳಿದರು ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಸಂಗತಿ ನನಗೆ ಗೊತ್ತಿರುವುದಿಲ್ಲ. ನಮ್ಮ ಊರಿನ ಪೂರ್ವ ದಿಕ್ಕಿಗೆ ದಾವಾ ಆಸ್ತಿ ಬರುತ್ತದೆ. ನಮ್ಮ ಊರಿನಿಂದ ದಾವಾ ಸ್ವತ್ತು 2 ಕಿ.ಮೀ ಅಂತರದಲ್ಲಿ ಇರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಯಾರ ಜಮೀನು

ಪು.ತಿ.ನ.

ಬರುತ್ತದೆ ಎಂದರೆ ಕುರೆರರವರ ಜಮೀನು ಇರುತ್ತದೆ. ಅವರ ಪೂರ್ಣ ಹೆಸರು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಉತ್ತರಕ್ಕೆ ಯಲ್ಲಪ್ಪ ಸುಳನ್ನವರ ಎನ್ನುವವರ ಜಮೀನು ಬರುತ್ತದೆ. ದಾವಾ ಸ್ವತ್ತಿನ ದಕ್ಷಿಣಕ್ಕೆ ಭರಮನ್ನವರ ಎನ್ನುವವರ ಜಮೀನು ಬರುತ್ತದೆ. ನಾನು ದಾವಾ ಸ್ವತ್ತಿನಲ್ಲಿ ನನ್ನ ಎತ್ತುಗಳ ಮುಖಾಂತರ ಬಾಡಿಗೆ ಹೊಡೆಯಲು ಅಂದಾಜು 15 ವರ್ಷಗಳಿಂದ ಹೋಗುತ್ತಿದ್ದೇನೆ. ನಾನು ಯಾವತ್ತು ದಾವಾ ಸ್ವತ್ತಿನಲ್ಲಿ ಎತ್ತುಗಳ ಮುಖಾಂತರ ಬಾಡಿಗೆಗಾಗಿ ಉಳುಮೆ ಮಾಡಲು ಹೋಗಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಹಣಿ ಪತ್ರಿಕೆಯಲ್ಲಿ ಪ್ರತಿವಾದಿಯ ಹೆಸರು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಮಂಜೂರು ಆದ ಜಮೀನು ಆಗಿತ್ತು ಎಂದರೆ ಸರಿಯಲ್ಲ. ಸದರಿ ಪ್ರತಿವಾದಿ ನಂ.1 ರವರ ತಂದೆ ಮೃತರಾದ ನಂತರ ಪ್ರತಿವಾದಿ ಮತ್ತು ಅವರ ಅಣ್ಣತಮ್ಮಂದಿರರು ವಿಭಾಗ ಆದಾಗ ದಾವಾ ಸ್ವತ್ತು ಪ್ರತಿವಾದಿಯ ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ತನ್ನ ಪಾಲಿಗೆ ಬಂದ ದಾವಾ ಸ್ವತ್ತಿನ ಜಮೀನಿನಲ್ಲಿ ಪ್ರತಿವಾದಿ ಸ್ವಾಧೀನಾನುಭವದಲ್ಲಿ ಇದ್ದು ಉಳಿಮೆ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.

ಪ್ರ.ತಿ.ನ.